## 19

# ಒಳಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು

ಯಾವುದೇ ಸಂಘಟನೆಯಲ್ಲಿ 90 ಶತ ಕಾರ್ಯವು 10 ಶತ ಸದಸ್ಯರಿಂದ ಮಾಡಲ್ಪಡುತ್ತದೆ. ಇದು ರೋಟರಿಕ್ಲಬ್ ಇಲ್ಲವೇ PTAದ, ನಾಯಕರಿಗೆ ಕೋಪ ವನ್ನೆಬ್ಬಿಸುವಂಥದ್ದೂ ಅನಾನುಕೂಲತೆಯುಳ್ಳದ್ದೂ ಆಗಿರಬಹುದು, ಆದರೆ ಇದು ಕರ್ತನ ಸಭೆಗೆ ಆತ್ಮಿಕವಾಗಿ ನಾಶನಕರವಾದದ್ದಾಗಬಹುದು. ಒಳಗೊಳ್ಳುವಿಕೆಯು ಯಾವುದೇ ಸಭೆಗೆ ಯಶಸ್ಸಿಗಾಗಿ ಅವಶ್ಯಕವಾದದ್ದಾಗಿರುತ್ತದೆ, ಆದರೆ ಸಾಧಿಸಲಿಕ್ಕೆ ಯಾವುದೂ ಹೆಚ್ಚು ಕಠಿಣವಾದದ್ದಾಗಿರುವದಿಲ್ಲ. ಅದು ಸಭೆಯ ನಾಯಕರಿಗೆ ಭಯಂಕರ ಆಹ್ವಾನವನ್ನು ಮುಂದಿಡುತ್ತದೆ.

## ಒಳಗೊಳ್ಳುವಿಕೆ: ಯಾಕೆ?

ಸಭೆಯ ಕೆಲಸದಲ್ಲಿ ಒಳಗೊಳ್ಳುವಿಕೆಯು ಯಾಕೆ ಮಹತ್ವದ್ದಾಗಿರುತ್ತದೆ?

### ಸುಖಕ್ಕೆ ಬೀಗದ ಕೈ

ಮೊದಲನೆಯದಾಗಿ, ಒಳಗೊಳ್ಳುವಿಕೆಯು ಕ್ರೈಸ್ತನ ಸುಖಕ್ಕೆ ಬೀಗದ ಕೈಯಾಗಿರುತ್ತದೆ. ಸ್ಥಳಿಕ ಸಭೆಯಲ್ಲಿ ಕಾರ್ಯ ನಿರತರಾಗಿರುವವರು, ತಮಗೆ ಆಸಕ್ತಿಯಿರುವ ಹಾಗೂ ಮಾಡಲು ಶಕ್ತರಾಗಿರುವ ಕಾರ್ಯಗಳಲ್ಲಿ ಕರ್ತನ ಸೇವೆ ಮಾಡುವವರು, ತಮ್ಮ ನಂಬಿಕೆಯಲ್ಲಿ ಎಷ್ಟೋ ಹೆಚ್ಚಾಗಿ ಸಂತೋಷವುಳ್ಳವರೂ, ಆ ಸಭೆಯ ಸದಸ್ಯರಾಗಿರುವದಕ್ಕೆ ಸಂತೃಪ್ತರಾಗಿರುವವರೂ ಆಗಿರುವರು. ಸಭೆಯಲ್ಲಿ "ನಿರುದ್ಯೋಗ ಕೈಗಳು ಪಿಶಾಚನ ಆಟದ ಸಂಗತಿಗಳಾಗಿರುವವು" ಎಂಬ ಜ್ಞಾನೋಕ್ತಿಯು ಆಗಾಗ ಸತ್ಯವಾ ಗಿರುತ್ತದೆ.

### ಸಭೆಯ ಬೆಳವಣಿಗೆಗೆ ಬೀಗದ ಕೈ

ಎರಡನೆಯದಾಗಿ, ಒಳಗೊಳ್ಳುವಿಕೆಯು ಸಭೆಯ ಬೆಳವಣಿಗೆಗಾಗಿ ಬೀಗದ ಕೈಯಾಗಿರುತ್ತದೆ. ಯಾವುದೇ ಸಂಘಟನೆಯಲ್ಲಿ ವ್ಯಕ್ತಿಗಳ ಚಟುವಟಿಕೆಯ ಭಾಗವಹಿಸುವಿಕೆಯಿಂದ ಯಶಸ್ಸು ಪರಿಣಾಮಗೊಳ್ಳುತ್ತದೆ. ನೆಹೆಮೀಯನ ನಾಯಕತ್ವದಲ್ಲಿ, ಯೆರೂಸಲೇಮಿನ ಗೋಡೆಗಳು ಕಟ್ಟಲ್ಪಟ್ಟವು ಯಾಕಂದರೆ "ಜನರಿಗೆ ಕೆಲಸ ಮಾಡಲು ಮನಸ್ಸಿತ್ತು" (ನೆಹೆಮೀಯ 4:6). ದೇವರ ಸಹಾಯದಿಂದ, ಗಿದ್ಯೋನನ ನೇತೃತ್ವದಲ್ಲಿ ಇಸ್ರಾಯೇಲು ಸೈನಿಕರ ಒಂದು ಚಿಕ್ಕ ಗುಂಪು ಮಿದ್ಯಾನ್ಯರ ಒಂದು ದೊಡ್ಡ ಸೇನೆಯು ಓಡಿ ಹೋಗುವಂತೆ ಮಾಡಿತು, ಯಾಕಂದರೆ "ಪ್ರತಿಯೊಬ್ಬನು ತನ್ನ ಸ್ಥಳದಲ್ಲಿ ನಿಂತುಕೊಂಡನು" (ನ್ಯಾಯಸ್ಥಾಪಕರು 7:21). ಸಭೆಯಲ್ಲಿಯೂ ಹೆಚ್ಚಾಗಿ ಇದೇ ಇರುವುದು; ಹೆಚ್ಚು ಜನರು ಕಾರ್ಯಶೀಲತೆಯಿಂದ ಕೆಲಸಮಾಡುವಾಗ, ಅಷ್ಟು ಹೆಚ್ಚಾಗಿ ಸಭೆಯು ಬೆಳೆಯುವುದು.

ಡೊನಾಲ್ಡ್ ಮಾಕ್ ಗರ್ವನ್, "ಚರ್ಚ್ ಗ್ರೋತ್" ಚಳುವಳಿಯ ಸಂಸ್ಥಾಪಕರು, ಈ ಚಳುವಳಿಯು ಸಭೆಯ ಬೆಳವಣಿಗೆಯನ್ನು ಜಾಗರೂಕತೆಯಿಂದ ಅಧ್ಯಯನ ಮಾಡುವ ಒಂದು ಪ್ರಯತ್ನವಾಗಿದೆ - ಸುವಾರ್ತೆಯನ್ನು ಸಾರುವದರಲ್ಲಿ ವೈಯಕ್ತಿಕ ವ್ಯಕ್ತಿಗಳ ಒಳಗೊಳ್ಳುವಿಕೆಯು ಸಭೆಯ ಬೆಳವಣಿಗೆಗೆ ಮಿಶನ್ ಕ್ಷೇತ್ರಗಳಲ್ಲಿ ಅತ್ಯಗತ್ಯವಾ

ದದ್ದಾಗಿದೆ. ಎಂಬ ತೀರ್ಮಾನಕ್ಕೆ ಬಂದರು ಆದಿ ಸಭೆಯು ಯಾಕೆ ಬೆಳೆಯಿತು? ದೊಡ್ಡ ಪ್ರಸಂಗಿಗಳಿಂದಲೋ? ಅದರ ದೊಡ್ಡ ಮಿಶನರಿಗಳ ಕಾರಣದಿಂದಲೋ? ಅದು ಭಾಗಶಃ ವಾಗಿ ಮಾತ್ರ ಅದರ ದರ್ಶನಾತ್ಮಕ ನಾಯಕತ್ವದಿಂದಲೋ? ಕೇವಲ ಭಾಗಶಃವಾಗಿ ಪ್ರಾಥಮಿಕ ವಾಗಿ, ಅದು ಬೆಳೆಯಿತು, ಯಾಕಂದರೆ ವೈಯಕ್ತಿಕ ಕ್ರೈಸ್ತರು ತಾವು ಹೋದಲೆಲ್ಲಾ ವಾಕ್ಯವನ್ನು ಪ್ರಸಂಗಿಸಿದರು (ಅಪೊಸ್ತಲರ ಕೃತ್ಯಗಳು 8:4). ಅಲೆಕ್ಸಾಂಡ್ರಿಯಾ, ಅಂತಿಯೋಕ ಮತ್ತು ರೋಮ್‌ದಲ್ಲಿಯ ದೊಡ್ಡ ಸಭೆಗಳು ಯಾವುದೇ ಅಪೊಸ್ತಲನ ಪ್ರಸಂಗಿಸುವಿಕೆಯಿಂದ ಪ್ರಾರಂಭವಾಗಲಿಲ್ಲ, ಆದರೆ ಅಲ್ಲಿಗೆ ಚದರಿಹೋದ ಹೆಸರು ತಿಳಿಯದ ಅನೇಕ ಕ್ರೈಸ್ತರು ಅಲ್ಲಿ ಇದ್ದು ತಮ್ಮ ಉಪಜೀವನ ಸಾಗಿಸುತ್ತ ತಮ್ಮ ನೆರೆಹೊರೆಯವರಿಗೆ ಕ್ರಿಸ್ತನ ಬಗ್ಗೆ ಹೇಳಿದ್ದರಿಂದ ಅದಾಯಿತು. ಹಾಗೆಯೇ ಇಂದಿನ ಜಗತ್ತಿನಲ್ಲಿ ಕರ್ತನ ಸಭೆಯು ಬೆಳೆಯುತ್ತದೆ. ಸಭೆಯ ಸೇವೆಗಳಲ್ಲಿ ತೊಡಗಿದ ಸದಸ್ಯರ ಪ್ರಯತ್ನಗಳಿಂದ ನೇರವಾಗಿ ಪ್ರಾರಂಭವಾಗುತ್ತವೆ.

ಬಹುಶಃ ಹೆಚ್ಚು ಮಹತ್ವದ್ದು ಸಹೋದರ ಫ್ಲೆವಿಲ್ ಯೀಕ್ಲಿ ಅವರಿಂದ ಇಂದು ಕಂಡು ಬಂದಿರುತ್ತದೆ[1]: ಸಭೆಯು ತನ್ನ ಸದಸ್ಯರ ಭಿನ್ನವಾದ ಪಾತ್ರಗಳಲ್ಲಿ ಒಳಗೊಳ್ಳುವದಕ್ಕೆ ತಕ್ಕ ಪ್ರಮಾಣದಲ್ಲಿ ಬೆಳೆಯುವುದು ಮಾತ್ರವಲ್ಲದೆ, ಸದಸ್ಯರು ಗ್ರಹಿಸುವದಕ್ಕಿಂತ ಹೆಚ್ಚಿನ ಪಾತ್ರಗಳು ಸಭೆಯಿಂದ ನೆರವೇರಿಸಲ್ಪಡಲಿಕ್ಕೆ ಇರುತ್ತವೆ. ಸಭೆಯು ಹೆಚ್ಚು ಬೆಳೆಯುವ ಸಾಧ್ಯತೆಯಿದೆ.

**ನಾಯಕತ್ವದ ಗುರಿ**

ಮೂರನೆಯದು, ಪ್ರತಿಯೊಬ್ಬ ಸದಸ್ಯನನ್ನು ಒಳಗೊಳಿಸುವುದು ನಾಯಕರ ಮುಖ್ಯ ಗುರಿಯಾಗಿರುತ್ತದೆ. ಸಭೆಯ ನಾಯಕರ ಗುರಿಯು ಏಕವಾಗಿ ಇಲ್ಲವೇ ಪ್ರಾಥಮಿಕವಾಗಿ ತಾವೇ ಸಭೆಯ ಕೆಲಸವನ್ನು ಮಾಡುವುದು ಆಗಿರುವದಿಲ್ಲ. ಸಭೆಯ ಸದಸ್ಯರು ತಮಗೆ ದೇವರಿಂದ ಕೊಡಲ್ಪಟ್ಟ ವರಗಳೊಂದಿಗೆ ಸಭೆಯ ಸೇವೆ ಮಾಡುವಂತೆ ಶಕ್ತರನ್ನಾಗಿ ಮಾಡುವುದಾಗಿರುತ್ತದೆ.

## ಒಳಗೊಳ್ಳುವಿಕೆ: ಹೇಗೆ?

ಹೇಳಲ್ಪಟ್ಟದ್ದನ್ನು ಯಾರು ಒಪ್ಪಿಕೊಳ್ಳದಿರಲಾರರು. ಒಳಗೊಳ್ಳುವಿಕೆಯು ಸಂತೋಷದ ಸದಸ್ಯತ್ವಕ್ಕೆ ಮತ್ತು ಸಭೆಯ ಬೆಳವಣಿಗೆಗೆ ಬೀಗದ ಕೈಯಾಗಿರುವದೆಂದು ಮತ್ತು ಸಭೆಯ ನಾಯಕರ ಕರ್ತವ್ಯವು ಸದಸ್ಯರ ಪರವಾಗಿ ಅವರನ್ನು ಒಳಗೊಳಿಸಲು ಪ್ರೋತ್ಸಾಹಿಸುವುದು ಎಂಬುದನ್ನು ನಾವೆಲ್ಲರೂ ಬಲ್ಲವರಾಗಿದ್ದೇವೆ.

ಸದಸ್ಯರನ್ನು ಸಭೆಯ ಕೆಲಸದಲ್ಲಿ ತೊಡಗಿಸುವುದು ಕಠಿಣವಾದದ್ದು ಸಮಸ್ಯೆಯಾಗಿರುತ್ತದೆ. ಸಭೆಯ ನಾಯಕರು ಕೆಲವು ಸಲ ಪ್ರಯತ್ನಿಸುವರು ಮತ್ತು ಸೋತು ಹೋಗುವರು. ಒಳಗೊಳಿಸುವ ಅದರ ಎಲ್ಲಾ ಪ್ರಯತ್ನಗಳ ನಂತರವೂ ಸದಸ್ಯರಲ್ಲಿ ಅನೇಕರು ಇನ್ನೂ ನೋಡುವವರಾಗಿಯೇ, ಇತರರು ಕೆಲಸ ಮಾಡುವದನ್ನು ಗಮನಿಸುವರಾಗಿಯೇ ಇರುತ್ತಾರೆ. ಆದುದರಿಂದ, "ಹೇಗೆ?" ಎಂಬ ಪ್ರಶ್ನೆಯು ಬಹಳ ಪ್ರಮುಖವಾದದ್ದಾಗಿರುತ್ತದೆ.

ಸದಸ್ಯರನ್ನು ಹೇಗೆ ಒಳಗೊಳಿಸಬೇಕೆಂಬುದರ ಬಗ್ಗೆ ಯಾವುದೇ ಸೂಚನೆಯು ತಾತ್ಕಾಲಿಕವಾದದ್ದಾಗಿದೆ; ಯಾವುದೇ ಯೋಜನೆಯು ಯಶಸ್ವಿಯಾಗುವ ಭರವಸೆಯಿರುವದಿಲ್ಲ. ಇನ್ನೂ ಕೆಲವು ಪರಿಹಾರಕ್ಕೆ ವಿಧಾನಗಳು ವಿಚಾರಿಸಲು ಯೋಗ್ಯವಾಗಿರುತ್ತವೆ.

**ಯೋಗ್ಯವಾದ ನೋಟಗಳು**

ಮೊದಲನೆಯದು, ಸಭಾ ನಾಯಕರು ಸಮಸ್ಯೆಯ ಸರಿಯಾದ ತಿಳುವಳಿಕೆಯನ್ನು ಬೆಳೆಸಿಕೊಳ್ಳುವ ಅಗತ್ಯತೆಯಿರುತ್ತದೆ. ನಿರ್ದಿಷ್ಟವಾಗಿ ಅವು ಈ ಕೆಳಗಿನವುಗಳನ್ನು ಗ್ರಹಿಸಿಕೊಳ್ಳಬೇಕು:

(1) ಒಳಗೊಳ್ಳಲು ಅವರು ಎಲ್ಲಾ ಸದಸ್ಯರನ್ನು ಎಂದೂ ಪಡೆದು ಕೊಳ್ಳುವದಿಲ್ಲ. ಆದುದರಿಂದ, ಒಳಗೊಂಡವರ ಬಗ್ಗೆ ಕೃತಜ್ಞತೆಯುಳ್ಳವರಾಗಿರುವದನ್ನು ಕಲಿತು ಕೊಳ್ಳಬೇಕು. ನಿರಾಶೆಯು ಒಳ್ಳೆಯ ನಾಯಕತ್ವದ ಮರಣಾಂತಿಕ ವೈರಿಯಾಗಿದೆ. ಒಬ್ಬ ನಾಯಕನು ತನ್ನನ್ನು ಬಹಳವಾಗಿ ನಿರಾಶನನ್ನಾಗಿ ಮಾಡಿ ಕೊಳ್ಳುವದಾದರೆ, ಅವನು ತಾನೇ ಕಾರ್ಯಮಾಡದವನೂ ಪರಿಣಾಮ ಮಾಡದವನೂ ಆಗಬಹುದು, ಇಲ್ಲವೇ ಅವನ ನಿರಾಶೆಯೊಂದಿಗೆ ಒಳಗೊಂಡಿರುವವರಿಗೆ ಅಂಟು ರೋಗದಂತೆ ಹೊಂದಿಕೊಳ್ಳಬಹುದು.

(2) ಬಹಳ ಸಲ, ವೈಯಕ್ತಿಕ ಸದಸ್ಯರು ಸಭೆಯ ನಾಯಕರು ತಿಳಿಯದ ರೀತಿಯಲ್ಲಿ ಕರ್ತನ ಕೆಲಸದಲ್ಲಿ ತೊಡಗಿರಬಹುದು. ಏಕಾಂಗಿಗಳಿಗೆ ಕಾರ್ಡುಗಳನ್ನು ಕಳುಹಿಸುತ್ತಿರಬಹುದು, ಸಂದರ್ಶಕರಿಗೆ ಟಿಪ್ಪಣೆಗಳನ್ನು ಬರೆಯುತ್ತಿರಬಹುದು, ಆಸ್ಪತ್ರೆಯನ್ನು ಸಂದರ್ಶಿಸುತ್ತಿರಬಹುದು, ವಿವಿಧ ರೀತಿಯಲ್ಲಿ ಮಿಶನ್ ಪ್ರಯತ್ನಗಳಿಗೆ ಸಹಾಯ ಮಾಡುತ್ತಿರಬಹುದು. ತಮ್ಮ ನೆರೆಹೊರೆಯಲ್ಲಿ ಕ್ರಿಸ್ತನ ಹೆಸರಿನಲ್ಲಿ ಒಳ್ಳೆಯದನ್ನು ಮಾಡುತ್ತಿರಬಹುದು. ಇತ್ಯಾದಿ. ಹಿರಿಯರು ಮತ್ತು ಪ್ರಸಂಗಿಗಳು, ಪ್ರತ್ಯೇಕವಾದ "ಸಭೆಯ ಕಾರ್ಯಕ್ರಮದಲ್ಲಿ" ಒಳಗೊಳ್ಳದಿರುವರು, ಒಳಗೊಂಡಿರುವುದೇ ಇಲ್ಲವೆಂದು ಯೋಚಿಸುವರು.

(3) ಕೆಲವು ಸದಸ್ಯರು ನಿಜವಾಗಿಯೂ ಅಶಕ್ತರಾಗಿರಬಹುದು. ಅದಕ್ಕೆ ಕಾರಣ ವಿಶೇಷ ಪರಿಸ್ಥಿತಿ (ಕುಟುಂಬದ ಪರಿಸ್ಥಿತಿ, ಅಸ್ವಸ್ಥತೆ ಇತ್ಯಾದಿ.) ಇರಬಹುದು, ಪ್ರತ್ಯೇಕವಾದ ಸಭೆಯ ಕಾರ್ಯಕ್ರಮದಲ್ಲಿ ಒಳಗೊಳ್ಳದಂತೆ ಮಾಡಬಹುದು. ಸಭೆಯ ಕೆಲಸದ ಕಾರ್ಯಕ್ರಮದಲ್ಲಿ ಭಾಗವಹಿಸದವರ ಬಗ್ಗೆ ಕೂಡಲೇ ತೀರ್ಪುಮಾಡಲಿಕ್ಕೆ ನಾಯಕರು ಹೋಗಬಾರದು ಖಂಡಿಸಬಾರದು.

(4) ಕೆಲವರಿಗೆ ಕುಟುಂಬಕ್ಕೆ ಸಮಯ ಕೊಡುವದನ್ನು ಕಳೆದು ಕೊಳ್ಳಬೇಕಾಗುವದರಿಂದ ಪ್ರತಿಯೊಂದು ಸಭೆಯ ಚಟುವಟಿಕೆಯಲ್ಲಿ ಭಾಗವಹಿಸಲಿಕ್ಕೆ ಆಗುವದಿಲ್ಲ. ಕೆಲವು ಸಲ ಮಕ್ಕಳು, ಯುವಕರು, ವಯಸ್ಕರು ಮತ್ತು ವಯಸ್ಸಾದ ಕ್ರೈಸ್ತರಿಗೆ ತಮ್ಮದೇ ಆದ ಚಟುವಟಿಕೆಗಳು ಇರುವವು. ಎರಡು ಗುಂಪುಗಳು ಯಾವುದನ್ನೂ ಒಂದಾಗಿ ಏರ್ಪಡಿಸುವದಿಲ್ಲ. ಸಭೆಯ ಪ್ರತಿಯೊಂದು ಚಟುವಟಿಕೆಯಲ್ಲಿ ಒಳಗೊಂಡಿರುವ ಕುಟುಂಬಗಳು ಅನೇಕವಾರಗಳವರೆಗೆ ಕುಟುಂಬ ಒಂದಾಗಿರುವ ಸಮಯವಿಲ್ಲದೇ ಹೋಗಬಹುದು.

**ಸರಿಯಾದ ಬೋಧನೆ**

ಸಭೆಯ ನಾಯಕರು ತಲಾಂತುಗಳ ಬಗ್ಗೆ ಬೈಬಲ್ ಬೋಧಿಸುವದನ್ನು ಬೋಧಿಸುವ ಅಗತ್ಯತೆ ಇರುತ್ತದೆ. ಅದು "ಆರಾಧನೆಯಲ್ಲಿ ನಡಿಸುವದನ್ನು" ಎಂಬ ಬೋಧನೆಯನ್ನು ಒಳಗೊಂಡಿರುವುದು ಸಭೆಯಲ್ಲಿ ಸದಸ್ಯರು ಒಳಗೊಳ್ಳಬಹುದಾದ ಕೇವಲ ಮಾರ್ಗವಾಗಿರುವದಿಲ್ಲ, ಈ ಕೆಳಗಿನವುಗಳನ್ನು ಬೋಧಿಸುವುದನ್ನು ಅದು ಒಳಗೊಂಡಿರುತ್ತದೆ:

(1) ಎಲ್ಲಾ ತಲಾಂತುಗಳು ದೇವರಿಂದ ಬಂದವುಗಳಾಗಿರುತ್ತವೆ. "ಎಲ್ಲಾ ಒಳ್ಳೆ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಿನಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದು ಬರುತ್ತವೆ" (ಯಾಕೋಬ 1:17ಅ).

(2) ಪ್ರತಿಯೊಬ್ಬ ಕ್ರೈಸ್ತನಿಗೆ ಒಂದು ಇಲ್ಲವೇ ಹೆಚ್ಚು ತಲಾಂತುಗಳು ಇರುತ್ತವೆ. ಯಾರೂ "ಯಾವ ತಲಾಂತು ಇಲ್ಲ"ದ ಸದಸ್ಯರಿರುವದಿಲ್ಲ ತಲಾಂತುಗಳಲ್ಲಿಯ ಸಾಮ್ಯದಂತೆ (ಒಂದು ತಲಾಂತು ಹಣದ ಒಂದು ಮೊತ್ತವಾಗಿತ್ತು) "ಯಾವ ತಲಾಂತು ಇಲ್ಲದ" ಯಾವುದೇ ಸೇವಕನು ಇರಲಿಲ್ಲ (ಮತ್ತಾಯ 25:15).

(3) ಕ್ರೈಸ್ತರಾಗಿ ನಾವು ನಮ್ಮ ಸ್ವಂತ ತಲಾಂತುಗಳನ್ನು ಗುರುತಿಸ ಬೇಕು. ನಮ್ಮ ಬಗ್ಗೆ ನಾವೇ ಹೆಚ್ಚಾಗಿ ತಿಳಿಯಬಾರದು. ಪೌಲನು ರೋಮಾಪುರದವರಿಗೆ ಹೀಗೆ ಒತ್ತಾಯಿಸಿದನು: "ದೇವರು ನನಗೆ ಕೃಪೆಮಾಡಿದ ಸೇವೆಯನ್ನು ನಡಿಸಿ ನಿಮ್ಮಲ್ಲಿ ಒಬ್ಬೊಬ್ಬನಿಗೆ ಹೇಳುವದೇ

ನೆಂದರೆ ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸ ಬಲವನ್ನು ಕೊಟ್ಟನೋ ಅದಕ್ಕೆ ತಕ್ಕ ಹಾಗೆ ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಿಕೊಳ್ಳಬೇಕು" (ರೋಮಾಪುರ 12:3). ನಮ್ಮ ಬಗ್ಗೆ ಕಡಿಮೆಯಾಗಿ ತಿಳಿದು ಕೊಳ್ಳಬೇಕು ಇಲ್ಲವೇ ನಮ್ಮ ತಲಾಂತುಗಳನ್ನು ಅಲ್ಲಗಳೆಯ ಬೇಕು ಎಂದು ಯೋಚಿಸಬೇಕೆಂದು ಇದು ನಮಗೆ ಬೋಧಿಸುವದಿಲ್ಲ. ನಮ್ಮ ತಲಾಂತುಗಳ ಬಗ್ಗೆ ಯೋಗ್ಯವಾಗಿ ತಿಳಿದು ಕೊಳ್ಳಬೇಕು, ಅವುಗಳ ಬಗ್ಗೆ ಹಟಮಾರಿಗಳಾಗಬಾರದೆಂದು ಹೇಳುತ್ತದೆ.

(4) ಕ್ರೈಸ್ತರಿಗೆ ಭಿನ್ನವಾದ ವರಗಳು ಕೊಡಲ್ಪಟ್ಟಿರುತ್ತವೆ.

(5) ಪ್ರತಿಯೊಂದು ತಲಾಂತು ಮಹತ್ವದ್ದಾಗಿದೆ. ಒಬ್ಬ ವ್ಯಕ್ತಿಯು ತನ್ನ ತಲಾಂತಿನಿಂದ ಮಾಡುವಂಥದ್ದು ಎಲ್ಲರ ಮೇಲೆ ಪರಿಣಾಮ ಮಾಡುತ್ತದೆಂದು ಕ್ರೈಸ್ತರು ಒಟ್ಟಾಗಿ ಬಂಧಿಸಲ್ಪಟ್ಟಿದ್ದಾರೆ. ಒಬ್ಬನು ಶ್ರಮೆ ಪಡುವಾಗ ಎಲ್ಲರೂ ಶ್ರಮೆ ಪಡುತ್ತಾರೆ, ಒಬ್ಬನು ಜಯಶಾಲಿಯಾಗುವಾಗ ಎಲ್ಲರೂ ಉಲ್ಲಾಸಪಡುತ್ತಾರೆ (1 ಕೊರಿಂಥ 12:25, 26). ಒಟ್ಟಾಗಿ ಭಿನ್ನವಾದ ಸದಸ್ಯರು ತಮ್ಮ ವಿವಿಧ ಸಮಸ್ಯೆಗಳೊಂದಿಗೆ ಸಭೆಯ ಚಟುವಟಿಕೆಗಳನ್ನು ಸಾಧ್ಯ ವಾಗಿ ಮಾಡುತ್ತಾರೆ.

(6) ಕ್ರೈಸ್ತರಾಗಿ ನಾವು ನಮ್ಮ ತಲಾಂತುಗಳನ್ನು, ಅವು ಯಾವವೇ ಆಗಿರಲಿ, ಪೂರ್ಣವಾಗಿ ಉಪಯೋಗಿಸಬೇಕು (ರೋಮಾಪುರ 12:6-8). ತಲಾಂತುಗಳ ಸಾಮ್ಯವು ನಮಗಿರುವದನ್ನು ನಾವು ಉಪಯೋಗಿಸುತ್ತೇವೆ ಇಲ್ಲವೇ ಕಳೆದು ಕೊಳ್ಳುತ್ತೇವೆ ಎಂದು ಬೋಧಿಸುವಂತೆ ತೋರುತ್ತದೆ! ನಮ್ಮ ಸಾಮರ್ಥ್ಯಗಳನ್ನು ಹೆಚ್ಚಾಗಿ ಬೆಳಿಸಿಕೊಳ್ಳ ಬೇಕೆಂಬುದನ್ನು ಅದು ಅನ್ವಯಿಸುತ್ತದೆ.

(7) ಎರಡು ಉದ್ದೇಶಗಳಿಗಾಗಿ ನಾವು ನಮ್ಮ ತಲಾಂತುಗಳನ್ನು ಉಪಯೋಗಿಸ ಬೇಕು: (ಎ) ದೇವರನ್ನು ಮಹಿಮೆ ಪಡಿಸುವದಕ್ಕಾಗಿ ಮತ್ತು (ಬಿ) ಸಹೋದರರಿಗೆ ಸಹಾಯ ಮಾಡುವದಕ್ಕಾಗಿ, "ಪ್ರತಿಯೊಬ್ಬನು ತಾನು ಹೊಂದಿದ ಕೃಪಾವರವನ್ನು ಎಲ್ಲರ ಸೇವೆಯಲ್ಲಿ ಉಪಯೋಗಿಸಲಿ, ... ಇದರಿಂದ ಎಲ್ಲಾದರಲ್ಲಿ ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರ ಉಂಟಾಗುವುದು" (1 ಪೇತ್ರ 4:10, 11).

(8) ನಾವು ನಮ್ಮ ತಲಾಂತುಗಳನ್ನು ಹೇಗೆ ಉಪಯೋಗಿಸಿರುವೆವು ಎಂಬುದಕ್ಕೆ ದೇವರು ನಮ್ಮಿಂದ ಲೆಕ್ಕಾ ಕೇಳುತ್ತಾನೆ. ನಾವು ಮನೆ ವಾರ್ತೆಯವರು (1 ಪೇತ್ರ 4:10). ಮತ್ತು ಮನೆ ವಾರ್ತೆಯವರು ತಮ್ಮ ಮನೆ ವಾರ್ತೆಯ ತನಕ್ಕೆ ಯಾವಾಗಲೂ ಲೆಕ್ಕಾ ಕೊಡಬೇಕು (1 ಕೊರಿಂಥ 4:2).

(9) ಸಭೆಯ ನಾಯಕರು ಸಭೆಯನ್ನು ಕಟ್ಟುವದಕ್ಕಾಗಿ ಎಲ್ಲಾ ಸದಸ್ಯರಿಗೆ ತಮ್ಮ ತಲಾಂತುಗಳನ್ನು ಉಪಯೋಗಿಸಲಿಕ್ಕಾಗುವಂತೆ ಸಾಧ್ಯಮಾಡಿಕೊಡಬೇಕು.

## ಒಂದು ಪ್ರೋತ್ಸಾಹಿಸುವ ವಾತಾವರಣ

ಸಭೆಯ ಸದಸ್ಯರು ತಮ್ಮ ವರಗಳನ್ನು ಉಪಯೋಗಿಸಲು ಸ್ವತಂತ್ರವಾಗಿರುವಂಥ ವಾತಾವಣವನ್ನು ಸಭೆಯ ನಾಯಕರು ಬೆಳಿಸತಕ್ಕದ್ದು. ಪ್ರೋತ್ಸಾಹಿಸುವಂಥ ವಾತಾವರಣವು ಐಕ್ಯತೆಯಿಂದ, ಸ್ನೇಹಭಾವದಿಂದ, ಅನ್ಯೋನ್ಯತೆಯಿಂದ, ಆನಂದದಿಂದ, ಪರಸ್ಪರ ಗೌರವದಿಂದ, ಮತ್ತು ಸತತವಾದ ಪ್ರೋತ್ಸಾಹಿಸುವಿಕೆಯಿಂದ ತುಂಬಿಕೊಂಡಿರುವುದು. ಎಲ್ಲಕ್ಕಿಂತ ಹೆಚ್ಚಾಗಿ, ಪ್ರಯತ್ನಿಸುವುದು ಮತ್ತು ಸೋಲುವುದು ಸರಿಯಾದದ್ದಾಗಿರುತ್ತದೆ ಎಂಬ ವಾತಾವರಣವನ್ನು ಹೊಂದಿಕೊಂಡಿರುವ ಅಗತ್ಯತೆಯಿದೆ.

ನೀನು ತಪ್ಪಾಗಿ ನಡಿಸಿಕೊಳ್ಳಲ್ಪಡುತ್ತಿದ್ದೀ ಇಲ್ಲವೇ ನೀನು ಮೆಚ್ಚಿಕೊಳ್ಳಲ್ಪಡುವದಿಲ್ಲ ಎಂಬಂತಿರುವ ಆಫೀಸಿನಲ್ಲಿ ಇಲ್ಲವೇ ಶಾಪಿನಲ್ಲಿ ಕೆಲಸ ಮಾಡುತ್ತಿರುವಿ ಎಂಬುದನ್ನು ಕಲ್ಪಿಸಿಕೋ ನಿನ್ನ ಅತ್ಯುತ್ತಮವಾದದ್ದನ್ನು ಮಾಡಲು ಬಯಸುವಿಯೋ? ಹಾಗೆಯೇ, ಸಭೆಯು

ಹೋರಾಟದ ಸ್ಥಳವಾಗಿದ್ದರೆ, ಇಲ್ಲವೇ ಸದಸ್ಯರು ತಪ್ಪಾಗಿ ನಡಿಸಿಕೊಳ್ಳಲ್ಪಟ್ಟಿದ್ದೇವೆ, ಮೆಚ್ಚಿಕೆ ಪಡೆದು ಕೊಂಡಿರುವದಿಲ್ಲ ಇಲ್ಲವೇ ಕಡೆಗಣಿಸಲ್ಪಟ್ಟಿದೇವೆಂಬುದಾಗಿದ್ದರೆ, ಸಭೆಯಲ್ಲಿರುವ ಜನರು ಹೆಚ್ಚಾದದ್ದನ್ನು ಮಾಡಲಿಕ್ಕೆ ನಾಯಕರು ನಿರೀಕ್ಷಿಸಲಿಕ್ಕಾಗುವದಿಲ್ಲ.

ಸಕಾರಾತ್ಮಕವಾದ ವಾತಾವರಣವನ್ನು ನಾಯಕರು ಹೇಗೆ ಸೃಷ್ಟಿಸಬಹುದು? ಪ್ರೋತ್ಸಾಹ ದಾಯಕವಾದ ವಾತಾವರಣವನ್ನು ಹುಟ್ಟಿಸಲಿಕ್ಕಾಗುವಂತೆ ಇಲ್ಲಿ ಕೆಲವು ಸೂಚನೆಗಳು ಇರುತ್ತವೆ:

(1) ಪ್ರತಿಯೊಬ್ಬ ಸದಸ್ಯನು ತಾನು ಸಭೆಯ ಮಹತ್ವದ ಸದಸ್ಯನಾಗಿದ್ದೆನೆಂದು ಅರ್ಥ ಮಾಡಿ ಕೊಳ್ಳತಕ್ಕದ್ದು. ಸಭೆಯಲ್ಲಿಯ ಅನೇಕರಿಂದ ಅವನು ಹೆಸರಿನಿಂದ ತಿಳಿಯಲ್ಪಟ್ಟವನಾಗಿರಬೇಕು.

(2) ಸದಸ್ಯರ ಮಧ್ಯದಲ್ಲಿ ಪ್ರೀತಿಯ ಸಂಬಂಧಗಳನ್ನು ಹುಟ್ಟಿಸಲು ಹುಡುಕಬೇಕು. ಪ್ರೀತಿಯು ಒಬ್ಬರನ್ನೊಬ್ಬರು ಸ್ವೀಕರಿಸುವದನ್ನು, ಕೊರತೆಗಳಿದ್ದರೂ ಭಿನ್ನತೆಗಳಿದ್ದರೂ, ಒಳಗೊಂಡಿರುತ್ತದೆ; ಮೆಚ್ಚಿಕೆಯ ಮತ್ತು ಹೊಗಳುವಿಕೆಯ ಉದಾರ ಸಹಾಯಗಳು; ದೂರು ಇಲ್ಲವೇ ವಿಮರ್ಶೆ ಅಲ್ಪವಾಗಿ ಇಲ್ಲವೇ ಇಲ್ಲವಾಗಿರುವುದು; ಸತತವಾದ ಸಹನೆ ಮತ್ತು ಕ್ಷಮಾಪಣೆ. ಅಂಥ ಸಂಬಂಧಗಳನ್ನು ಬೆಳಿಸುವ ಒಂದು ಮಾರ್ಗವು ಸದಸ್ಯರಿಗೆ ಮನೆಗಳಲ್ಲಿ ಕೂಡಿ ಬರುವದಕ್ಕೆ ಮನೆಗಳಲ್ಲಿ ಮತ್ತು ಸಭೆಯ ಕಟ್ಟಡದಲ್ಲಿ ಒಂದಾಗಿ ತಿನ್ನುವದಕ್ಕೆ ಅವಕಾಶ ಒದಗಿಸಿಕೊಡುವುದಾಗಿರುತ್ತದೆ. ನಾವು ಒಬ್ಬರನ್ನೊಬ್ಬರು ಚೆನ್ನಾಗಿ ಅರಿತು ಕೊಂಡರೆ; ನಾವು ಒಬ್ಬರನ್ನೊಬ್ಬರು ಹೆಚ್ಚೆಚ್ಚಾಗಿ ಪ್ರೀತಿಸುವೆವು ಮತ್ತು ಮೆಚ್ಚಿಕೊಳ್ಳುವೆವು.

(3) ಸದಸ್ಯರಿಗೆ ಸಭೆಯ ಬಗ್ಗೆ ಸಕಾರಾತ್ಮಕವಾದ ಮನೋಭಾವನೆಗಳು ಇರುವಂತೆ ಸಹಾಯ ಮಾಡಿರಿ. ಬಹಿರಂಗ ಸಂಪರ್ಕವು, ಸಾಧ್ಯವಾದಮಟ್ಟಿಗೆ, ಸಕಾರಾತ್ಮಕ ವಾದದ್ದಾಗಿರಬೇಕು. ಸಾಧ್ಯವಾದ ಮಟ್ಟಿಗೆ, ಸಕಾರಾತ್ಮಕವಾದದ್ದಾಗಿರಬೇಕು. ಸಾಧ್ಯವಾದ ಮಟ್ಟಿಗೆ, ಸಭೆಯಿಂದ ಮಾಡಲ್ಪಟ್ಟ ಪ್ರತಿಯೊಂದರಲ್ಲಿ ಶ್ರೇಷ್ಠತೆಯು ಇರತಕ್ಕದ್ದು. ಅನೇಕ ಸಭೆಗಳಲ್ಲಿ ಕೆಳಮಟ್ಟದ ಸಾಧನೆಯ ಸರಣಿಗಳಿರುತ್ತವೆ. ಅದನ್ನು ನಿರಾಶೆಯು ಹಿಂಬಾಲಿಸುತ್ತದೆ. ಅದನ್ನು ಇನ್ನೂ ಕಡೆಮೆ ತರಗತಿಯ ಸಾಧನೆ ಹಿಂಬಾಲಿಸುತ್ತದೆ. ಈ ವರ್ತುಳವು ಮುರಿಯಲ್ಪಡ ಬೇಕು. ದೇವರು ನಂಬಿಗಸ್ತಕೆಯ ಪ್ರಯತ್ನದೊಂದಿಗೆ ಸಂತೋಷಪಡುತ್ತಾನೆಂಬುದನ್ನು ಒತ್ತಿ ಹೇಳುವುದರಿಂದ ಪ್ರೋತ್ಸಾಹವು ಬರುತ್ತದೆ.

**ಯೋಗ್ಯವಾದ ಉದಾಹರಣೆಗಳು**

ಸಭೆಯ ನಾಯಕರು ಒಳಗೊಳ್ಳುವಿಕೆಗೆ ಆದರ್ಶರಾಗಿರುವ ಅಗತ್ಯತೆಯಿದೆ. ಸಭೆಯ ಸದಸ್ಯರು ಸಭೆಯ ವಿವಿಧ ಕೆಲಸಗಳಲ್ಲಿ ಒಳಗೊಂಡಿರಲು ಕೇಳಲ್ಪಟ್ಟರೆ, ಆಗ ಅವರ ನಾಯಕರು ಸಹ ಅದರಲ್ಲಿ ಒಳಗೊಂಡಿರುವದನ್ನು ಅವರು ನಿರೀಕ್ಷಿಸುವುದು ಸರಿಯಾದದ್ದಾಗಿರುತ್ತದೆ. ಪ್ರಸಂಗಿಗಳು ಮತ್ತು ಹಿರಿಯರು ಉದಾಹರಣೆಯಿಂದ ಚೆನ್ನಾಗಿ ನಡಿಸುತ್ತಾರೆ (1 ಪೇತ್ರ 5:3). "ಮನೋಭಾವನೆಗಳು ಬಹಳ ಸಲ ಬೋಧಿಸಲ್ಪಡುವದಕ್ಕಿಂತ ಹಿಡಿಯಲ್ಪಡುತ್ತವೆ" ಎಂದು ಯಾರೋ ಒಬ್ಬರು ಹೇಳಿದ್ದಾರೆ. ನಾಯಕರು ಸೇವಕ ಮನೋ ಭಾವವನ್ನು ಪ್ರದರ್ಶಿಸಿದರೆ, ಆಗ ಅವರ ಅನುಯಾಯಿಗಳು ಆ ಮನೋಭಾವನೆಯನ್ನು "ಹಿಡಿದು ಕೊಳ್ಳುವ" ನಿರೀಕ್ಷೆಯಿರುತ್ತದೆ.

**ಯೋಗ್ಯವಾದ ಸೇವೆಗಳು**

ನಾಯಕರು ಸದಸ್ಯರ ಸಾಮರ್ಥ್ಯಗಳನ್ನು (1) ಅವರ ತಲಾಂತುಗಳನ್ನು, ಆಸಕ್ತಿಗಳನ್ನು ಮತ್ತು ತರಬೇತಿಯನ್ನು ಗುರುತಿಸಲು ಕೇಳಲ್ಪಟ್ಟ ಸಮೀಕ್ಷೆಗಳನ್ನು ಉಪಯೋಗಿಸುವದರಿಂದ, (2) ಸದಸ್ಯರು ಏನನ್ನು ಮಾಡಲು ಶಕ್ತರಾಗಿದ್ದಾರೆ ಮತ್ತು ಏನನ್ನು ಮಾಡಲು ಬಯಸು

ತ್ತಾರೆ ಎಂಬುದನ್ನು ಗಮನವಿಟ್ಟು ಕೇಳಿ ಜಾಗರೂಕತೆಯಿಂದ ಗಮನಿಸುವದರಿಂದಲೂ, ಮತ್ತು (3) ಸದಸ್ಯರಿಗೆ ಅವರ ವರಗಳನ್ನು, ಕಂಡುಕೊಂಡು ಬೆಳಸಿ ಕೊಳ್ಳಲು ಅವಕಾಶ ಕೊಡುವದರಿಂದ ಹುಡುಕಿ ಕಂಡು ಕೊಳ್ಳಲು ಪ್ರಯತ್ನಿಸಬೇಕು.

ಸಭೆಯ ನಾಯಕರು ಸಭೆಯಲ್ಲಿ ಲಭ್ಯವಿರುವ ಸೇವೆಗಳ ಬಗ್ಗೆ, ಯಾವ ಕೆಲಸ ಗಳನ್ನು ಮಾಡಬೇಕಾಗಿರುವುದು ಎಂಬುದರ ಬಗ್ಗೆ ಮತ್ತು ಯಾವ ಕೆಲಸದಲ್ಲಿ ತೊಡಗ ಬೇಕು ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಿಕೊಳ್ಳಬೇಕು. ಕೂಡಲೇ ಸ್ಪಷ್ಟವಾಗಿರದ, ಸೇವೆ ಮಾಡಲು ಅನೇಕ ಅವಕಾಶಗಳು ಆಗಾಗ ಇರುತ್ತವೆ. ಉದಾಹರಣೆಯಾಗಿ, ಸಭೆಯ ಶಿಕ್ಷಣ ಕೆಲಸಕ್ಕಾಗಿ ಅವಶ್ಯಕತೆಗಳು ಕೇವಲ ಶಿಕ್ಷಕರಷ್ಟೇ ಅಲ್ಲ, ಆಡಳಿತಾತ್ಮಕ, ಕಲೆಯ, ಜ್ಞಾನದ ಮತ್ತು ಕಾರ್ಯದರ್ಶಿಯ ವರಗಳಿದ್ದವರ ಅವಶ್ಯಕತೆಯಿರುತ್ತದೆ. ಹೀಗೆ ವಿಷಯ ಸಂಗ್ರಹಣೆಯು ಸಭೆಯ ಪ್ರತಿಯೊಬ್ಬ ಸದಸ್ಯನಿಗೆ ಅವನಿಗೆ ಮಾಡಲಿಕ್ಕೆ ಯಾವುದನ್ನು ಕೊಡಬೇಕು ಎಂದು ಯೋಚಿಸಿ ಕೆಲಸಗಳನ್ನು ಹೆಚ್ಚಿಸುವದಕ್ಕೆ ನಡಿಸಲ್ಪಡುತ್ತದೆ.

ಒಂದು ಪರ್ಯಾಯವಾದ ವಿಧಾನವು ಸಭೆಗೆ ತಮಗೆ ಯಾವುದರಲ್ಲಿ ಸೇವೆ ಮಾಡಲು ಅಪೇಕ್ಷೆಯಿದೆ ಎಂಬ ಮಾಹಿತಿಯನ್ನು ಸದಸ್ಯರಿಂದ ಪಡೆಯುವುದು, ಆ ಕೆಲಸಗಳನ್ನು ಮಾಡಲಿಕ್ಕೆ ಬೇಕಾದ ಸಾಧನಗಳನ್ನು ಅಧಿಕಾರವನ್ನು ಒದಗಿಸುವುದು, ಮತ್ತು ಅವುಗಳನ್ನು ಸಾಧಿಸಲು ಅವರನ್ನು ಸ್ವತಂತ್ರರನ್ನಾಗಿ ಬಿಡುವುದು ಅಗತ್ಯವಿದೆ.

ಆಗ ಸಭೆಯ ನಾಯಕರು ಎಲ್ಲಾ ಸದಸ್ಯರಿಗೆ ಯಾವ ನಿರ್ದಿಷ್ಟವಾದ ಸಂಗತಿಗಳು ಮಾಡಲ್ಪಟ್ಟಿವೆ ಮತ್ತು ಯಾವವುಗಳನ್ನು ಮಾಡಬೇಕಾಗಿದೆ ಎಂಬುದನ್ನು ತಿಳಿಯುವಂತೆ ಮಾಡಬೇಕು. ಸೇವೆಗಾಗಿ ಇರುವ ಅವಕಾಶಗಳ ಬಗ್ಗೆ ಸಭೆಯು ತಿಳಿದಿರುವಂತೆ ಮಾಡುವುದು ಬಹಳ ಸಲ ಹೆಚ್ಚಿನ ಒಳಗೊಳ್ಳುವಿಕೆಯ ಕಡೆಗೆ ನಡಿಸುವುದು.

**ಸದಸ್ಯರನ್ನು ಪ್ರೇರೇಪಿಸುವುದು**

ಒಳಗೊಳ್ಳುವಿಕೆಯನ್ನು ಪ್ರೋತ್ಸಾಹಿಸಲು, ಪ್ರೇರೇಪಣೆಯ ಯೋಗ್ಯ ವಿಧಾನಗಳನ್ನು ಸಭೆಯ ನಾಯಕರು ಉಪಯೋಗಿಸುವ ಅಗತ್ಯತೆ ಇರುತ್ತದೆ.[2] "ವಾತಾವರಣವನ್ನು" ಹುಟ್ಟಿಸುವುದು ಬೇಕಾಗಿರುವಂಥ ಪ್ರೇರೇಪಣೆಯ ದೊಡ್ಡ ಭಾಗದ ಜವಾಬ್ದಾರಿಕೆ ತೆಗೆದು ಕೊಳ್ಳಬೇಕು. ಆದರೆ ಅದು ಅವೆಲ್ಲವನ್ನು ಮಾಡುವದಿಲ್ಲ. ಪ್ರೇರೇಪಿಸಲು ನಾಯಕರು ಏನನ್ನು ಮಾಡಬೇಕು? (1) ಯೋಜಿಸುವದರಲ್ಲಿ, ಅವರು ಸಭೆಗಾಗಿ ಸಾಧ್ಯವಾದಷ್ಟು ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆಯನ್ನು ಸುಲಭವಾದದ್ದನ್ನಾಗಿ ಮಾಡಬೇಕು. (2) ಕಾರ್ಯಕ್ರಮವನ್ನು ಪ್ರಾರಂಭಿಸುವದರಲ್ಲಿ ಮತ್ತು ಯೋಜಿಸುವದರಲ್ಲಿ ಸದಸ್ಯರನ್ನು ಒಳಗೊಳಿಸಬೇಕು. ಇಲ್ಲವೇ ಬೇರೆ ಇತರ ರೀತಿಯಲ್ಲಿ, ಅವರು "ನಮ್ಮ ಕಾರ್ಯಕ್ರಮ" ಎಂದು ಅವರು ದೃಷ್ಟಿಸಲಿಕ್ಕಾಗುವಂತೆ ಅಗತ್ಯವಾದ ಆಸಕ್ತಿಯನ್ನು ಬೆಳಸಿಕೊಳ್ಳುವಂತೆ ಅವರಿಗೆ ಸಹಾಯ ಮಾಡಬೇಕು. (3) ಅವರು ಸದಸ್ಯರಿಗೆ ತಿಳಿಸುತ್ತಾ ಇರಬೇಕು. ಕಾರ್ಯಕ್ರಮವು ಯೋಚಿಸಲ್ಪಡಲು ಪ್ರಾರಂಭ ವಾಗುವದರಿಂದ ಕಾರ್ಯಕ್ರಮವು ಸುರುವಾಗುವದರ ತನಕ ಅದರ ಬಗ್ಗೆ ಅವರೆಲ್ಲರೂ ತಿಳಿದು ಕೊಳ್ಳುವಂತೆ ಮಾಡಬೇಕು. (4) ಪ್ರಚಾರ ವಸ್ತುಗಳು ಬಹಳವಾದ ಸಂಖ್ಯೆಯಲ್ಲಿ ಒದಗಿಸಲ್ಪಡ ಬೇಕು. (5) ಜಾಹೀರಾತು ಯೋಗ್ಯವಾದದ್ದಾಗಿರುವುದು. ಹೊರಗಿನವರಿಗೆ ತಲುಪುವಂತೆ ರೂಪಿಸಲ್ಪಡುವ ಜಾಹೀರಾತು ಸಭೆಯವರನ್ನೂ ಸಹ ಪ್ರೇರೇಪಿಸಬಹುದು. (6) ಸದಸ್ಯರಿಗಾಗಿ ಅದು ಅವರು ಒಳಗೊಳ್ಳುವಂತೆ ಮನವಿಯಾಗಿ ವರ್ತಿಸುವಂತೆ ಅರ್ಥ ಗರ್ಭಿತವಾದದ್ದನ್ನಾಗಿ ಮಾಡಬೇಕು. ಇದು ಹೇಗೆ ಅವರ ಅಗತ್ಯತೆಗಳನ್ನು ತೃಪ್ತಿಪಡಿಸುವುದು? (7) ಕಾರ್ಯಗಳು ಯೋಜಿಸಲ್ಪಡುವಂತೆ ಜನರಿಗೆ "ನಿಜ ಜೀವನದಲ್ಲಿ" ಇರುವ ಮಿತಿಗ ಳನ್ನು ಮತ್ತು ಸಮಸ್ಯೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. (8) ಬಹಿರಂಗ ಪ್ರಕಟನೆಗಳ ಮೇಲೆ ಮಾತ್ರವೇ ಅವಲಂಭಿಸಿರುವದರ ಬದಲು ಅವರು ಜನರೊಂದಿಗೆ ವೈಯಕ್ತಿಕವಾಗಿ

ಮಾತಾಡತಕ್ಕದ್ದು.

## ಮುಕ್ತಾಯ

ಒಳಗೊಳ್ಳುವಿಕೆಯನ್ನು ಚೆನ್ನಾಗಿ ಉದಾಹರಿಸುವ ಒಂದು ಸಭೆಯ ಅತ್ಯುತ್ತಮವಾದ ಚಿತ್ರವು ದೇಹದ್ದಾಗಿರುತ್ತದೆ. ನಡೆಯುತ್ತ ಇರುವ ಒಂದು ಮಾನವ ದೇಹವನ್ನು ಕಲ್ಪಿಸಿಕೊಳ್ಳಿರಿ. ಯಶಸ್ವಿಯಾಗಿ ನಡೆಯ ಬೇಕಾದರೆ, ದೇಹದ ಪ್ರತಿಯೊಂದು ಭಾಗವು, ಕಾಲುಗಳು ಪಾದಗಳು ಅಷ್ಟೇ ಅಲ್ಲ, ತೋಳುಗಳು, ಹೆಗಲುಗಳು, ಕುತ್ತಿಗೆ, ಹೃದಯ, ಪುಪ್ಪುಸ, ಕಣ್ಣುಗಳು, ಮೆದುಳು, ಮತ್ತು ದೇಹದ ಇತರ ಅಂಗವು - ತನ್ನ ತನ್ನ ಕೆಲಸಮಾಡಬೇಕು. ಒಂದೇ ಕಾಲು, ಇಲ್ಲವೇ ತೋಳುಗಳಿಲ್ಲದ ಇಲ್ಲವೇ ಕೇವಲ ಭಾಗಶಃ ಸಾಮರ್ಥ್ಯವಿರುವ ದೇಹವು ನಡೆಯಬಲ್ಲದು ಆದರೆ ಅಂಥ ದೇಹವು ಅಂಗವಿಕಲವಾದದ್ದಾಗಿರುತ್ತದೆ. ತನ್ನ ಸಂಪೂರ್ಣ ಸಾಮರ್ಥ್ಯದೊಂದಿಗೆ ದೇಹವು ಕಾರ್ಯಮಾಡಬೇಕಾಗಿದ್ದರೆ, ಪ್ರತಿಯೊಂದು ಭಾಗವು ಯೋಗ್ಯವಾಗಿ ಕಾರ್ಯಮಾಡಬೇಕು. ಹಾಗೆಯೇ, ಕೆಲವೇ ಸದಸ್ಯರನ್ನೊಳಗೊಂಡಿರುವದರೊಂದಿಗೆ ಸಭೆಯು ಕುಂಟುತ್ತಾ ಹೋಗಬಹುದು, ಆದರೆ ಅದು ಯಶಸ್ವಿಯಾಗ ಬೇಕಾದರೆ ಪ್ರತಿಯೊಬ್ಬ ಕ್ರೈಸ್ತನು ಒಳಗೊಂಡಿರುವ ಅಗತ್ಯತೆಯಿರುತ್ತದೆ ಎಫೆಸ 4:15, 16 ಹೀಗೆ ಹೇಳುತ್ತದೆ,

> ... ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳ ಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು. ಆತನೇ ಶಿರಸ್ಸು; ದೇಹವೆಲ್ಲಾ ಆತನ ದೊರೆತನದಲ್ಲಿದ್ದು ತನ್ನಲ್ಲಿರುವ ಎಲ್ಲಾ ನರಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು ಪ್ರತಿ ಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯ ಹೊಂದಿ ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುತ್ತದೆ.

"ಪ್ರತಿಯೊಂದು ಅಂಗವು ಯೋಗ್ಯವಾಗಿ ಕೆಲಸ ಮಾಡುವದರಿಂದ" ದೇಹವು ಬೆಳೆಯುತ್ತದೆ. ಮತ್ತು ಪ್ರೀತಿಯಲ್ಲಿ ಕಟ್ಟಲ್ಪಡುತ್ತದೆ. ಈ ಮನೋಭಾವನೆಯಿರುವುದರಿಂದ ಪ್ರತಿಯೊಬ್ಬ ಸದಸ್ಯನು ಚೆನ್ನಾಗಿ ಕಾರ್ಯ ಮಾಡುತ್ತಾನೆ:

ನಾನು ಕೇವಲ ಒಬ್ಬನು,
ಆದರೆ ನಾನು ಒಬ್ಬನಾಗಿದ್ದೇನೆ.
ನಾನು ಪ್ರತಿಯೊಂದನ್ನೂ ಮಾಡಲಾರೆನು,
ಆದರೆ ನಾನು ಕೆಲವೊಂದನ್ನು ಮಾಡಬಲ್ಲೆನು.
ಮತ್ತು ನಾನು ಮಾಡಬಹುದಾದಂಥದ್ದನ್ನು,
ದೇವರ ಕೃಪೆಯಿಂದ ನಾನು ಮಾಡುತ್ತೇನೆ.

---

ಟಿಪ್ಪಣಿಗಳು

[1]Flavil R. Yeakley, Jr., *Why Churches Grow,* 3d ed. (Broken Arrow, Okla.: Christian Communications, 1979), 42- 45. [2]See Coy Roper, "Motivation," *Truth for Today* 15 (December 1994), 41-43.